**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.**

**ಸಿ.ಸಿ.ನಂ. 3672/2022**

ಸಿ.ಡಬ್ಲ್ಯೂ -01

ಪಿ.ಡಬ್ಲ್ಯೂ-01

ಸಾಕ್ಷಿದಾರನ ಹೆಸರು :- ಸುಂದರಯ್ಯ

ತಂದೆಯ ಹೆಸರು :- ಲೇಟ್ ಕೃಷ್ಣಶೆಟ್ಟಿ

ವಯಸ್ಸು :- 40 ವರ್ಷ

ಉದ್ಯೋಗ :- ವ್ಯವಸಾಯ

ವಾಸ :- ದೊಡ್ಡಮಾವತ್ತೂರು

**ಸಾಕ್ಷಿಗೆ ದಿಃ 14.07.2025 ರಂದು ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ದಿಃ 03.03.2019 ರಂದು ನಾನು ಚಾಸಾ 2 ನಮ್ಮ ಜಮೀನಿನಲ್ಲಿ ಸುಮಾರು 4 ರಿಂದ 4.30 ರ ಸಮಯದಲ್ಲಿ ಕೆಲಸ ಮಾಡುತ್ತಿರುವಾಗ ಆರೋಪಿತರೆಲ್ಲರೂ ಅಲ್ಲಿಗೆ ಬಂದು ನಮ್ಮ ಮೇಲೆ ದೊಣ್ಣೆ ಮತ್ತು ಮಚ್ಚಿನಿಂದ ಹಲ್ಲೆ ಮಾಡಿರುತ್ತಾರೆ. ನನಗೆ ಎಡಗಡೆ ತಲೆಗೆ ಮತ್ತು ಎಡಭುಜಕ್ಕೆ ಹೊಡೆದು ಗಾಯ ಮಾಡಿರುತ್ತಾರೆ. ನಂತರ ಡಾಬಾದ ಹತ್ತಿರ ಕರೆದುಕೊಂಡು ಹೋಗಿ ಅಲ್ಲಿಯೂ ಸಹ ಹೊಡೆದಿರುತ್ತಾರೆ. ನಂತರ ನಮ್ಮನ್ನು ಅವರೇ ಆಸ್ಪತ್ರೆಯ ಹತ್ತಿರ ಬಿಟ್ಟು ಹೋಗಿರುತ್ತಾರೆ. ನಾನು ಗೊಲ್ಲರಪಟ್ಟಿ ಪಾಳ್ಯದ ಬಳಿ ಠಾಣೆಗೆ ಹೋಗುತ್ತಿದ್ದಾಗ ಮತ್ತು ನನಗೆ ಹೊಡೆದಿರುತ್ತಾರೆ.

ಆಸ್ಪತ್ರೆಗೆ ಇನ್ಸಪೇಕ್ಟರ್ ಬಂದಿರುತ್ತಾರೆ. ನಾನು 4 ನೇ ತಾರಿಖಿನಂದು ದುರನ್ನು ನೀಡಿರುತ್ತೇನೆ. ದೂರನ್ನು ನಿ.ಪಿ 1 ಎಂದು ಸಹಿ ನಿ.ಪಿ 1(ಎ)ಎಂದು ಗುರುತಿಸಲಾಯಿತು. ಅದೇ ದಿನ ಪೋಲಿಸರು ಮದ್ಯಾಹ್ನ 1 ಗಂಟೆಯ ಸಮಯದಲ್ಲಿ ಸ್ಥಳಕ್ಕೆ ಬಂದು ಪಂಚನಾಮೆ ಮಾಡಿರುತ್ತಾರೆ. ಆ ಸಮಯದಲ್ಲಿ ಚಾಸಾ 4 ಮತ್ತು 5 ಸಹ ಇದ್ದರು. ಸದರಿ ಪಂಚನಾಮೆಯನ್ನು ನಿ.ಪಿ 2 ಎಂದು ಸಹಿ ನಿ.ಪಿ 2 (ಎ) ಎಂದು ಗುರುತಿಸಲಾಯಿತು. ದೊಣ್ಣೆ ಮತ್ತು ಮಚ್ಚನ್ನು ತೆಗೆದುಕೊಂಡು ಹೋಗಿರುತ್ತಾರೆ. ದೊಣ್ಣೆ ಮತ್ತು ಮಚ್ಚನ್ನು ನೋಡಿದರೆ ಗುರುತಿಸುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಮುಂದುವರೆದ ಮುಖ್ಯ ವಿಚಾರಣೆ ಕಾಲಾವಕಾಶ ಕೋರಿದ್ದು ಕೋರಿಗೆ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

**ಸಹಿ/-**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.**

**ಕುಣಿಗಲ್.**